# ರೊಬಾಟ್‌ನಿಂದ ಹೃದಯ ಶಸ್ತ್ರಚಿಕಿತ್ಸೆ

ರಿಮೋಟ್ ಕಂಟ್ರೋಲರ್ ರೊಬಾಟ್ ಬಳಸಿ ಹೃದಯ ಶಸ್ತ್ರಚಿಕಿತ್ಸೆಯನ್ನು ಬ್ರಿಟನ್ನಿನ ಆಸ್ಪತ್ರೆಯೊಂದರಲ್ಲಿ ಯಶಸ್ವಿಯಾಗಿ ನಡೆಸಲಾಗಿದೆ.

ಲೈಸೆಸ್ಟರ್‌ನ ಗ್ಲೆನ್‌ಫೀಲ್ಡ್ ಆಸ್ಪತ್ರೆಯಲ್ಲಿ ಡಾ.ಆ್ಯಂಡ್ರೆ ಅವರು ಶಸ್ತ್ರಚಿಕಿತ್ಸೆ ಕೊಠಡಿಯ ಹೊರಗಿದ್ದುಕೊಂಡು ರಿಮೋಟ್ ಮೂಲಕ ರೊಬಾಟ್ ಅನ್ನು ನಿಯಂತ್ರಿಸಿದರು. ರೊಬಾಟ್ ಚಿಕಿತ್ಸೆ ನೀಡಿ ಒಂದು ಗಂಟೆಯಲ್ಲೇ ರೋಗಿಯ ಅನಿಯಮಿತ ಹೃದಯ ಬಡಿತ ನಿಯಂತ್ರಣಕ್ಕೆ ಬಂತು ಎನ್ನುತ್ತಾರೆ ವೈದ್ಯರು. ರೊಬಾಟಿಕ್ ಶಸ್ತ್ರಚಿಕಿತ್ಸೆ ಅಭಿವೃದ್ಧಿ ಹೊಂದಿದ ರಾಷ್ಟ್ರಗಳಲ್ಲಿ ಸಾಮಾನ್ಯವಾಗಿದೆ. ಕೆಲವು ಬಗೆಯ ಕ್ಯಾನ್ಸರ್, ಕೊರೊನರಿ ಆರ್ಟರಿ ಕಾಯಿಲೆ, ಕಿಡ್ನಿ ಕ್ಯಾನ್ಸರ್‌ಗೆ ಇದನ್ನು ಬಳಸಲಾಗುತ್ತಿದೆ. ಆದರೆ ಹೃದ್ರೋಗಕ್ಕೆ ಇದನ್ನು ಬಳಸಿದ್ದು ಇದೇ ಮೊದಲು. ಈ ಚಿಕಿತ್ಸೆಯನ್ನು ವಿಶ್ವದ ಇತರೆಡೆಯೂ ತಜ್ಞ ವೈದ್ಯರ ಅನುಪಸ್ಥಿತಿಯಲ್ಲಿ ಅಂದರೆ ಅವರಿಂದ ಸೂಕ್ತ ಸಲಹೆ ಪಡೆದು ನಡೆಸಬಹುದು. ಜೊತೆಗೆ ಚಿಕಿತ್ಸೆ ನಡೆಸುವಾಗ ಹೊರಹೊಮ್ಮುವ ರೇಡಿಯೋ ವಿಕಿರಣದ ಅಪಾಯದಿಂದ ಹಾಗೂ ಬಳಲಿಕೆಯಿಂದ ವೈದ್ಯರು ಪಾರಾಗಬಹುದು.

# ಮುರಿದ ಎಲುಬು ಚಿಕಿತ್ಸೆಗೆ ಪ್ರೊಟೀನ್

ದೇಹದಲ್ಲಿ ಉತ್ಪನ್ನವಾಗುವ ನೈಸರ್ಗಿಕ ಪ್ರೊಟೀನ್ ಎಲುಬಿನ ಬೆಳವಣಿಗೆಗೆ ನೆರವಾಗಬಲ್ಲದು. ಇದು ಮುರಿದ ಎಲುಬಿನ ಮರುಜೋಡಣೆಗೆ ಸಹಾಯಕ ಎಂದು ಕ್ಯಾಲಿಫೋರ್ನಿಯಾದ ಸ್ಟ್ಯಾನ್‌ಫೋರ್ಡ್ ವಿಶ್ವವಿದ್ಯಾನಿಲಯದ ಡಾ.ಜಿಲ್ ಹೆಲ್ಮ್ಸ್ ತಿಳಿಸಿದ್ದಾರೆ.

ಡಬ್ಲ್ಯುಎನ್‌ಟಿ ಎಂದು ಹೆಸರಿಸಲಾದ ಈ ಪ್ರೊಟೀನ್ ಎಲುಬಿನ ಸ್ಟೆಮ್‌ಸೆಲ್ ಕ್ರಿಯಾಶೀಲವಾಗುವಂತೆ ಸಂದೇಶ ಕಳಿಸುತ್ತದೆ. ಇದು ಎಲುಬಿನ ಕಸಿಗೂ ನೆರವಾಗಲಿದೆ. ಪ್ರಾಣಿಗಳಲ್ಲಿ ಎಲುಬು ಮುರಿದರೂ ನೈಸರ್ಗಿಕವಾಗಿ ಜೋಡಣೆಯಾಗಲು ಇದೇ ಪ್ರೊಟೀನ್ ಕಾರಣ ಎನ್ನುತ್ತಾರೆ ಡಾ.ಜಿಲ್. ಆದರೆ ಈ ಪ್ರೊಟೀನ್ ನೀರಿನಲ್ಲಿ ಸುಲಭವಾಗಿ ಕರಗುವುದಿಲ್ಲ. ಇದನ್ನು ಲೈಪೊಸೋಮ್ ಎಂಬ ಕೊಬ್ಬಿನಂಶದ ಗುಳ್ಳೆಗಳಲ್ಲಿ ಸೇರಿಸಲು ವೈದ್ಯರು ಯಶಸ್ವಿಯಾಗಿದ್ದಾರೆ. ಇದನ್ನು ಚರ್ಮದ ಗಾಯ, ಪಾರ್ಶ್ವವಾಯು ಹಾಗೂ ಹೃದಯಾಘಾತದಂಥ ಸಮಸ್ಯೆಗಳ ಮೇಲೂ ಪ್ರಯೋಗಿಸಲು ನಿರ್ಧರಿಸಲಾಗಿದೆ.

# ಮಕ್ಕಳಿಗೆ ಹೃದಯದ ಸಮಸ್ಯೆ

ದಢೂತಿ ಮಹಿಳೆಯರಿಗೆ ಜನಿಸುವ ಮಕ್ಕಳಲ್ಲಿ ಹೃದಯದ ತೊಂದರೆ ಇರುವ ಸಾಧ್ಯತೆ ಹೆಚ್ಚು ಎಂದು ಅಮೆರಿಕದಲ್ಲಿ ನಡೆಸಿದ ಅಧ್ಯಯನವೊಂದು ತಿಳಿಸಿದೆ. ಕಳೆದ 10 ವರ್ಷಗಳಲ್ಲಿ ನಡೆಸಿದ ಅಧ್ಯಯನದಿಂದ ಇಂಥ ಮಹಿಳೆಯರಿಗೆ ಜನಿಸುವ ಮಕ್ಕಳಲ್ಲಿ ಹೃದಯದ ಸಮಸ್ಯೆಯ ಸಂಭವ ಶೇ 33ರಷ್ಟು ಹೆಚ್ಚು ಎಂಬುದು ಗೊತ್ತಾಗಿದೆ.

ತೂಕ ಜಾಸ್ತಿ ಇರುವವರಲ್ಲಿ ಮಧುಮೇಹದ ತೊಂದರೆಯಿರುವುದು ಸಾಮಾನ್ಯ. ಇದು ಕೂಡಾ ಮಕ್ಕಳಲ್ಲಿ ಹೃದಯದ ಸಮಸ್ಯೆಗೆ ಕಾರಣ. ದಪ್ಪ ಇರುವ ಮಹಿಳೆಯರು ಗರ್ಭ ಧರಿಸುವ ಮುನ್ನ ತೂಕ ಕಡಿಮೆ ಮಾಡಿಕೊಳ್ಳುವುದು ಒಳಿತು.

# ನಾಳದಲ್ಲಿ ರಕ್ತ ಹೆಪ್ಪುಗಟ್ಟುವಿಕೆ

ರಕ್ತನಾಳದಲ್ಲಿ ರಕ್ತ ಹೆಪ್ಪುಗಟ್ಟುವಿಕೆಗೆ ದೇಹದ ಅತಿಯಾದ ತೂಕ ಹಾಗೂ ಧೂಮಪಾನ ಕಾರಣ ಎನ್ನುತ್ತದೆ ಅಮೆರಿಕದ ಜರ್ನಲ್ 'ಸರ್ಕುಲೇಶನ್'.

ವೆನಸ್ ಥ್ರೋಂಬೊ ಎಂಬೊಲಿಸಂ ಎಂಬ ಈ ಸಮಸ್ಯೆ ಸಾಮಾನ್ಯವಾಗಿ ಕಾಲಿನ ರಕ್ತನಾಳದಲ್ಲಿ ಕಾಣಿಸಿಕೊಳ್ಳುತ್ತದೆ. ಈ ಹೆಪ್ಪುಗಟ್ಟಿದ ರಕ್ತ ಶ್ವಾಸಕೋಶಕ್ಕೆ ಪಯಣಿಸಿ ಪಲ್ಮನರಿ ಎಂಬೊಲಿಸಂ ಎಂಬ ಅಪಾಯಕಾರಿ ಸಮಸ್ಯೆಗೆ ಕಾರಣವಾಗುತ್ತದೆ. ಇದು ಮರಣಾಂತಿಕ. ಕೊಲೆಸ್ಟರಾಲ್, ಮಧುಮೇಹ ಹಾಗೂ ಹೆಚ್ಚಿನ ರಕ್ತದೊತ್ತಡ ಮತ್ತು ಧೂಮಪಾನ ಥ್ರೋಂಬೊ ಎಂಬೊಲಿಸಂ ಸಮಸ್ಯೆಗೆ ಕಾರಣ. ಆದರೆ ಇವುಗಳಲ್ಲಿ ಸ್ಥೂಲದೇಹದ ಸಮಸ್ಯೆ ಅತ್ಯಂತ ಹೆಚ್ಚು ತೊಂದರೆದಾಯಕ.

■ ಸುಧಿ





ಬೇಸಿಗೆಯಲ್ಲಿ ನೈಸರ್ಗಿಕ ತ್ವಚೆಯ ರಕ್ಷಣೆ ಹುಡುಕುತ್ತಿದ್ದೀರಾ?

ಹಿಮಾಲಯ ಅವರ ರಕ್ಷಣಾತ್ಮಕ ಸನ್‌ಸ್ಕ್ರೀನ್ ಪ್ರಯತ್ನಿಸಿ ನೋಡಿರಿ. ಭಾರತೀಯ ತ್ವಚೆಗಾಗಿಯೇ ವಿಶೇಷವಾಗಿ ಸೃಷ್ಟಿಸಲಾಗಿರುವ ಇದು ಸಿನ್ನಾಬ್ಲಾಕ್ ಎಂಬ ಮಹತ್ಸಾಧನೆಯ ಯುಎಸ್ ಪೇಟೆಂಟ್ ಹೊಂದಿರುವ ಗಿಡ ಮೂಲಿಕೆಗಳ ಸೂತ್ರವನ್ನು ಹೊಂದಿದೆ. ಕ್ರ್ಯಾಬ್ ಆ್ಯಪಲ್ ಮತ್ತು ಲೋಳೆಸರದೊಂದಿಗೆ ಇದು, ನಿಮ್ಮ ತ್ವಚೆಯನ್ನು ಅಪಾಯಕಾರಿ ಯುವಿ ಕಿರಣಗಳಿಂದ ರಕ್ಷಿಸುವುದು ಮಾತ್ರವೇ ಅಲ್ಲ, ಅದರ ಪೋಷಣೆಯನ್ನೂ ಮಾಡುತ್ತದೆ. ಮುನ್ನಡೆಯಿರಿ, ಸ್ವಲ್ಪ ಹಚ್ಚಿಕೊಂಡು, ಬಿಸಿಲನ್ನು ಸವಿಯಿರಿ.

CINNABLOC
Natural Sun Protection Agent
US Patented




PIONEERING HERBAL RESEARCH SINCE 1930.



ಕ್ರ್ಯಾಬ್ ಆ್ಯಪಲ್

ತ್ವಚೆಯ ಕೋಶಗಳ ಅವನತಿಯನ್ನು ಹಾಗೂ ಸಮಯಕ್ಕೆ ಮೊದಲೇ ತ್ವಚೆಯ ವಯಸ್ಸಾಗುವಿಕೆಯಿಂದ ರಕ್ಷಿಸುತ್ತದೆ.



ಲೋಳೆಸರ

ತ್ವಚೆಗೆ ತೇವಾಂಶ ಒದಗಿಸುತ್ತದೆ.

Himalaya®
HERBALS